## ನಿಮ್ಮೊಡನೆ

# ವಿದೇಶೀ ವಿ.ವಿ.ಗಳು ಬಂದರೆ..

**ವಿದೇಶೀ** ವಿಶ್ವವಿದ್ಯಾನಿಲಯಗಳು ದೇಶವನ್ನು ಪ್ರವೇಶಿಸುವುದಕ್ಕೆ ಕೇಂದ್ರ ಸಚಿವ ಸಂಪುಟ ಸಮ್ಮತಿ ವ್ಯಕ್ತಪಡಿಸಿದೆ. ಕೇಂದ್ರ ಸರ್ಕಾರವು ಈ ಕುರಿತ ಮಸೂದೆಯನ್ನು ಎಂಟು ತಿಂಗಳೊಳಗೆ ಸಂಸತ್ತಿನಲ್ಲಿ ಮಂಡಿಸಿ ಅನುಮೋದನೆ ಪಡೆಯಬೇಕಿದೆ. ವಿದೇಶೀ ವಿಶ್ವವಿದ್ಯಾನಿಲಯಗಳು ಭಾರತಕ್ಕೆ ಬಂದ ತಕ್ಷಣ ಇಲ್ಲಿನ ಉನ್ನತ ಶಿಕ್ಷಣದ ಗುಣಮಟ್ಟದಲ್ಲಿ ಗಮನಾರ್ಹ ಬದಲಾವಣೆ ಆಗಬಹುದು ಎಂಬ ನಿರೀಕ್ಷೆ ಎಲ್ಲೆಡೆ ವ್ಯಕ್ತವಾಗುತ್ತಿದೆ. ಹಾರ್ವರ್ಡ್, ಕೇಂಬ್ರಿಡ್ಜ್, ಕಾರ್ನೆಗಿ ಮಿಲನ್ ಮುಂತಾದ ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾನಿಲಯಗಳು ಭಾರತಕ್ಕೆ ಬಂದರೆ, ಇಲ್ಲಿ ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ಹೆಚ್ಚಬಹುದು ಎನ್ನುವ ನಿರೀಕ್ಷೆ ತಪ್ಪೇನಲ್ಲ. ಆದರೆ ಈ ವಿದೇಶಿ ವಿಶ್ವವಿದ್ಯಾನಿಲಯ ಗಳು ಭಾರತದಲ್ಲಿ ಪೂರ್ಣ ಪ್ರಮಾಣದ ಕ್ಯಾಂಪಸ್ ಆರಂಭಿಸುತ್ತವೆಯೆ.. ಅಥವಾ ಇಲ್ಲಿನ ವಿಶ್ವ ವಿದ್ಯಾನಿಲಯಗಳ ಜತೆ ಸಹಭಾಗಿತ್ವದ ಕೋರ್ಸ್‌ಗಳನ್ನಷ್ಟೆ ನಡೆಸುತ್ತವೆಯೆ.. ಎನ್ನುವುದು ಇನ್ನಷ್ಟೆ ಸ್ಪಷ್ಟವಾಗಬೇಕಿದೆ.

ಸದ್ಯ ಸುಮಾರು 50ಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳು ಭಾರತದ ಉನ್ನತ ಶಿಕ್ಷಣ ಮಾರುಕಟ್ಟೆಯನ್ನು ಪ್ರವೇಶಿಸಲು ಉತ್ಸಾಹ ತೋರಿ ಕೇಂದ್ರ ಸರಕಾರಕ್ಕೆ ಅರ್ಜಿ ಸಲ್ಲಿಸಿವೆ. ಇವುಗಳಲ್ಲಿ ಡ್ಯೂಕ್ ಯೂನಿವರ್ಸಿಟಿ, ಜಾರ್ಜಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಲಂಡನ್ನಿನ ಇಂಪೀರಿಯಲ್ ಕಾಲೇಜ್ ಮುಂತಾದ ಪ್ರತಿಷ್ಠಿತ ಸಂಸ್ಥೆಗಳೂ ಸೇರಿವೆ. ಆದರೆ ಅರ್ಜಿ ಸಲ್ಲಿಸಿರುವ 50 ಸಂಸ್ಥೆಗಳಲ್ಲಿ ಕೇವಲ 3–4 ಸಂಸ್ಥೆಗಳು ಮಾತ್ರ ಇಲ್ಲಿಯೇ ಕ್ಯಾಂಪಸ್ ಸ್ಥಾಪಿಸಲು ಉತ್ಸಾಹ ತೋರಿಸಿವೆ ಎನ್ನಲಾಗಿದೆ. ಉಳಿದವೆಲ್ಲ ಸದ್ಯಕ್ಕೆ ಇಲ್ಲಿನ ವಿಶ್ವವಿದ್ಯಾನಿಲಯಗಳ ಜತೆಗೆ ಸಹಭಾಗಿತ್ವ, ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಸ್ಥಾಪಿಸಲಷ್ಟೆ ಮನಸ್ಸು ಮಾಡಿವೆ ಎಂಬ ವರದಿಗಳಿವೆ.

ಪ್ರತಿಷ್ಠಿತ ವಿದೇಶೀ ವಿ.ವಿ.ಗಳ ಸ್ಪರ್ಧೆಯಿಂದ ನಮ್ಮ ದೇಶೀಯ ವಿ.ವಿ.ಗಳೂ ತಮ್ಮ ಗುಣಮಟ್ಟ ಹೆಚ್ಚಿಸಿಕೊಳ್ಳುವ ಸಾಧ್ಯತೆ ಇದೆ ಎನ್ನುವುದು ನಿಜ. ಆದರೆ ವಿದೇಶೀ ವಿ.ವಿ.ಗಳು ಬಂದಾಕ್ಷಣ ನಮ್ಮ ಉನ್ನತ ಶಿಕ್ಷಣದ ಮಟ್ಟ ತನ್ನಿಂದತಾನೇ ಏರುತ್ತದೆ ಎನ್ನುವ ಭ್ರಮೆ ಅನಗತ್ಯ. ಇಲ್ಲಿ ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ, ನಿಯಂತ್ರಿಸುವ ಸಂಸ್ಥೆಗಳು ಈಗಾಗಲೇ ಅನಗತ್ಯ ಸರ್ಕಾರಿ ಹಸ್ತಕ್ಷೇಪದಿಂದ ಹೇಗೆ ಕುಲಗೆಟ್ಟಿವೆ ಎನ್ನುವುದು ಗೊತ್ತೇ ಇದೆ. ವಿಶ್ವವಿದ್ಯಾನಿಲಯಗಳ ಗುಣಮಟ್ಟದ ಮೇಲೆ ಕಣ್ಗಾವಲು ನಡೆಸುವ ನೇರ ಹೊಣೆಗಾರಿಕೆಯುಳ್ಳ ಯುಜಿಸಿ ಯಂತೂ ಬಾಗಿಲು ಮುಚ್ಚುವ ಹಂತದಲ್ಲಿದೆ. ಇದರ ಬದಲಾಗಿ ಗುಣಮಟ್ಟ ನಿಯಂತ್ರಣದ ಹೊಸ ಉನ್ನತ ಶಿಕ್ಷಣ ಮಂಡಳಿಯನ್ನು ಸರ್ಕಾರ ಆರಂಭಿಸಲು ಹೊರಟಿರುವುದು ಒಳ್ಳೆಯದೇ. ಆದರೆ ಹೊಸ ಸಂಸ್ಥೆಯಲ್ಲೂ ಗುಣಮಟ್ಟಕ್ಕೆ ಸಂಬಂಧಿಸಿ ಅನಗತ್ಯ ಸರ್ಕಾರಿ ಹಸ್ತಕ್ಷೇಪ ನಡೆಯದಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಆಳುವವರದ್ದು.

ವಿದೇಶೀ ವಿ.ವಿ.ಗಳು ಭಾರತದ ಯಾವ ವಿ.ವಿ.ಗಳ ಜತೆಗೆ ಸಹಭಾಗಿತ್ವ ಹೊಂದಲಿವೆ ಎನ್ನುವುದೂ ಮುಖ್ಯ. ನಮ್ಮಲ್ಲಿ ಜಾಗತಿಕ ಗುಣಮಟ್ಟದ ಖಾಸಗಿ ವಿ.ವಿ.ಗಳು ಇಲ್ಲವೆಂದಲ್ಲ. ಆದರೆ ಕೆಲವು ಖಾಸಗಿ ವಿ.ವಿ.ಗಳು ಉನ್ನತ ಶಿಕ್ಷಣವನ್ನು ಕೇವಲ ಹಣ ಮಾಡುವ ದಂಧೆಯ ಮಟ್ಟಕ್ಕೆ ಇಳಿಸಿರುವುದೂ ಇದೆ. ವಿದೇಶೀ ವಿ.ವಿ.ಗಳು ಇಲ್ಲಿನ ಇಂತಹ ಕಳಪೆ ಖಾಸಗಿ ವಿ.ವಿ.ಗಳ ಜತೆ ಸಹಭಾಗಿತ್ವ ಹೊಂದಿದರೆ ಉನ್ನತ ಶಿಕ್ಷಣ ಇನ್ನಷ್ಟು ದುಬಾರಿಯಾಗುವ ಸಾಧ್ಯತೆಯಷ್ಟೇ ಆಗುತ್ತದೆ. ಜತೆಗೆ ಭಾರತದಂತಹ ಸಾಮಾಜಿಕ ಅಸಮತೆಯ ಸಮಾಜದಲ್ಲಿ ನಿರ್ವಹಿಸಲೇಬೇಕಾದ ಮೀಸಲಾತಿಯಂತಹ ಕ್ರಮಗಳನ್ನು ಈ ವಿದೇಶೀ ವಿ.ವಿ.ಗಳು ಅನುಸರಿಸುವ ಅಗತ್ಯವಿಲ್ಲ ಎನ್ನುವ ಧೋರಣೆಯೂ ಅಪಾಯಕಾರಿಯೇ. ಮೀಸಲಾತಿ ಇರುವ ನಮ್ಮ ಪ್ರತಿಷ್ಠಿತ ಐಐಟಿ, ಐಐಎಂಗಳ ನೂರಾರು ಪದವೀಧರರು ವಿದೇಶಗಳಲ್ಲಿ ಅತ್ಯುನ್ನತ ಹುದ್ದೆಗಳಲ್ಲಿ ದೊಡ್ಡ ಹೆಸರು ಮಾಡಿರುವುದೂ ಗಮನಾರ್ಹವೇ.

ವಿದೇಶಿ ವಿ.ವಿ.ಗಳು ಭಾರತೀಯ ಶಿಕ್ಷಣ ಮಾರುಕಟ್ಟೆಯ ಅತ್ಯುನ್ನತ ಪ್ರತಿಭಾವಂತರ ಮೇಲೆ ಕಣ್ಣಿಟ್ಟಿರುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಕೇವಲ ಅಸಾಂಪ್ರದಾಯಿಕ ಕೋರ್ಸ್‌ಗಳನ್ನಷ್ಟೆ ಇಲ್ಲಿ ಆರಂಭಿಸಿದರೆ ಪ್ರಯೋಜನವಿಲ್ಲ. ವಿದೇಶೀ ವಿ.ವಿ.ಗಳ ಅಂತರರಾಷ್ಟ್ರೀಯ ಗುಣಮಟ್ಟದ ಬೋಧನೆಯ ಲಾಭ ನಮ್ಮ ವಿದ್ಯಾರ್ಥಿಗಳಿಗೂ ಸಿಕ್ಕಿದರೆ ಒಳ್ಳೆಯದು. ಸಂಶೋಧನೆಯ ಅವಕಾಶಗಳು ಹೆಚ್ಚುವುದೂ ಆಗಬೇಕು. ಆದರೆ ಶಿಕ್ಷಣ ಮಾರುಕಟ್ಟೆಯಲ್ಲಿ ಕೇವಲ ವ್ಯಾಪಾರದ ದೃಷ್ಟಿ ಮಾತ್ರ ಇಟ್ಟುಕೊಂಡು ವಿದೇಶೀ ವಿ.ವಿ.ಗಳು ಆಗಮಿಸಿದರೆ ನಾವು ಕಳೆದುಕೊಳ್ಳುವುದೇ ಹೆಚ್ಚು. ಹಾಗಾಗದಂತೆ ಸರ್ಕಾರ ಮುನ್ನೆಚ್ಚರಿಕೆ ವಹಿಸಬೇಕು.

■ ಬಿ.ಎಂ. ಹನೀಫ್

ಪ್ರತಿಷ್ಠಿತ ವಿದೇಶೀ ವಿ.ವಿ.ಗಳ ಸ್ಪರ್ಧೆಯಿಂದ ನಮ್ಮ ದೇಶೀಯ ವಿ.ವಿ.ಗಳೂ ತಮ್ಮ ಗುಣಮಟ್ಟ ಹೆಚ್ಚಿಸಿಕೊಳ್ಳುವ ಸಾಧ್ಯತೆ ಇದೆ ಎನ್ನುವುದು ನಿಜ. ಆದರೆ ವಿದೇಶೀ ವಿ.ವಿ.ಗಳು ಬಂದಾಕ್ಷಣ ನಮ್ಮ ಉನ್ನತ ಶಿಕ್ಷಣದ ಮಟ್ಟ ತನ್ನಿಂದ ತಾನೇ ಏರುತ್ತದೆ ಎನ್ನುವ ಭ್ರಮೆ ಅನಗತ್ಯ. ಇಲ್ಲಿ ಉನ್ನತ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ, ನಿಯಂತ್ರಿಸುವ ಸಂಸ್ಥೆಗಳು ಈಗಾಗಲೇ ಅನಗತ್ಯ ಸರ್ಕಾರಿ ಹಸ್ತಕ್ಷೇಪದಿಂದ ಹೇಗೆ ಕುಲಗೆಟ್ಟಿವೆ ಎನ್ನುವುದು ಗೊತ್ತೇ ಇದೆ.



ಶಿಲ್ಪಾ